ಉಡುಪಿ ಜಿಲ್ಲೆಯಲ್ಲಿ ವಕ್ಫ್ ಸಮಿತಿ ರಚನೆ

3119 - ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಉಡುಪಿ ಜಿಲ್ಲೆ ಮತ್ತು ಇತರ ಹೊಸ ಜಿಲ್ಲೆಗಳಲ್ಲಿ ವಕ್ಫ್ ಸಮಿತಿಗಳನ್ನು ರಚಿಸಲಾಗಿದೆಯೇ?*
2. *ಹಾಗಿಲ್ಲದಿದ್ದಲ್ಲಿ ವಕ್ಫ್ ಸಮಿತಿಗಳನ್ನು ರಚಿಸುವ ನಿರ್ಧಾರವಿದೆಯೇ?*
3. *ಹಾಗಿದ್ದಲ್ಲಿ ಈ ಬಗ್ಗೆ ಎಂದು ಕ್ರಮ ತೆಗೆದುಕೊಳ್ಳಲಾಗುವುದು?*

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

1. ಹೊಸ ಜಿಲ್ಲೆಗಳಾದ ದಾವಣಗೆರೆ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಜಿಲ್ಲಾ ವಕ್ಫ್ ಸಲಹಾ ಸಮಿತಿಗಳನ್ನು ರಚಿಸಿ ಕೇವಲ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ನೇಮಕ ಮಾಡಲಾಗಿದೆ. ಉಳಿದ ಜಿಲ್ಲೆಗಳಲ್ಲಿ ರಚಿಸಿಲ್ಲ.

2. ಹೌದು.

3. ಈ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ವಕ್ಫ್ ಸಲಹಾ ಸಮಿತಿಗಳನ್ನು ರಚಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗುತ್ತದೆ. ಆದಷ್ಟು ಬೇಗ ಈ ಸಮಿತಿಗಳನ್ನು ರಚಿಸಲಾಗುವುದು.

ಚಿಕ್ಕೋಡಿ ತಾಲ್ಲೂಕಿನ ಪಶುಚಿಕಿತ್ಸಾಲಯಗಳಲ್ಲಿ ಖಾಲಿ ಹುದ್ದೆಗಳ ಭರ್ತಿ

3120 - ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗಾ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಬೋರಗಾಂವ, ಮಾಂಗೂರ, ಸದಲಗಾ, ಸೇಜ, ಯಡೂರ, ಎಕ್ಸಂಬಾ, ಭೋಜನ್ ಮತ್ತು ಗಳತಗಾ ಪಶು ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹಿರಿಯ ಪಶು ಪರೀಕ್ಷಕರ ಹಾಗೂ ಪಶುವೈದ್ಯಕೀಯ ಸಹಾಯಕರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
2. *ಬಂದಿದ್ದಲ್ಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು, ವಿವರ ನೀಡುವುದು?*

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

1. ಪಶುವೈದ್ಯಾಧಿಕಾರಿಗಳ ಹಾಗೂ ಪಶುವೈದ್ಯ ಸಹಾಯಕರ ಹುದ್ದೆಗಳು ಮಾತ್ರ ಖಾಲಿ ಇದೆ.

2. ಪಶುವೈದ್ಯಾಧಿಕಾರಿಗಳು ಮತ್ತು ಪಶುವೈದ್ಯಕೀಯ ಸಹಾಯಕರುಗಳ ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗಿದೆ.